> ತನ್ನ ಧಣಿ ಗಾಳಿ–ಬೆಳಕು ಕಾಣದ ಕೋಣೆಯಲ್ಲಿ ಏಳು ವರ್ಷಗಳಿಂದ ಹೆಣವಾಗಿ ಕುಳಿತಿದ್ದಾನೆ ಎನ್ನುವುದು ಪರ್ಸಿವಲ್‌ಗೆ ಮೊದಲೇ ತಿಳಿದಿತ್ತು... ಆದರೂ ಅವನೇಕೆ ಈ ವಿಚಾರವನ್ನು ಯಾರಿಗೂ ಹೇಳಲಿಲ್ಲ! ಆತ ತನ್ನ ಧಣಿಗೆ ಕೊಟ್ಟ ಮಾತಾದರೂ ಏನು?

ವಿಸಿಟಿಂಗ್ ಕಾರ್ಡ್ ಕೊಟ್ಟು ಮನೆ ಸೇರಿದೆ.

ಈ ವಿಚಾರದ ಬಗ್ಗೆ ನನ್ನನ್ನು ಯಾರೂ ಸಂಪರ್ಕಿಸದೇ ಇದ್ದುದರಿಂದ ಇದಕ್ಕೆ ಪರಿಹಾರ ಸಿಕ್ಕಿರಬೇಕೆಂದು ಹೆಚ್ಚು ಗಮನ ಕೊಡಲಿಲ್ಲ. ಆದರೆ, ಒಂದು ಮಧ್ಯಾಹ್ನ ನನ್ನ ಕಚೇರಿಗೆ ಜೆ.ಎಚ್. ಪರ್ಸಿವಲ್ ಎಂಬಾತ ನನ್ನನ್ನು ನೋಡಲು ಬಂದ. ಈ ಹೆಸರು ಎಲ್ಲೋ ಕೇಳಿದ ಜ್ಞಾಪಕ. ಆತ, ''ಸರ್ ನನ್ನ ಹೆಸರನ್ನು ನನ್ನ ಸ್ನೇಹಿತ ಫೀಲಿಕ್ಸ್ ನಿಮಗೆ ಹೇಳಿದ್ದಾನೆ. ಆದ್ದರಿಂದ ನಿಮ್ಮನ್ನು ನೋಡಲು ಬಂದೆ'' ಎಂದ.

''ಹೌದು ಹೌದು ಬನ್ನಿ ಏನು ವಿಷಯ.''

''ಅವನ ತಂದೆ ಪರಾರಿ ಆದದ್ದು ಮತ್ತು ಮೊಹರು ಹಾಕಿರುವ ಕೋಣೆಯ ಬಗ್ಗೆ ನಿಮಗೆ ಗೊತ್ತಿದೆ. ಈ ವಿಚಾರದಲ್ಲಿ ನೀವು ನಮಗೆ ಸಹಾಯ ಮಾಡುತ್ತೀರಿ ಅಂತ ಹೇಳಿದ್ದೀರಂತೆ.''

''ಹೌದು ಹೇಳಿದ್ದೆ, ಈಗ ನನ್ನಿಂದ ಏನಾಗಬೇಕು ಹೇಳಿ.''

''ಫೀನಿಕ್ಸ್‌ನ 21ನೇ ಹುಟ್ಟುಹಬ್ಬದ ದಿನ ಮೊಹರನ್ನು ತೆಗೆದು ಆ ಕೋಣೆಯ ಒಳಗೆ ಹೋಗಬಹುದು ಅಂತ ಮಿಸ್ಟರ್ ಸ್ಟಾನಿಫೋರ್ಡ್ ಅನುಮತಿ ಕೊಟ್ಟಿದ್ದಾರೆ ಅಂತ ನಿಮಗೆ ಗೊತ್ತಿದೆ ಅಲ್ಲವೇ?''

''ಹೌದು, ನಾನು ಆ ಪತ್ರವನ್ನು ಓದಿದ್ದೇನೆ.''

''ಇವತ್ತು ಫೀನಿಕ್ಸ್‌ಗೆ 21 ವರ್ಷ.''

''ಓ ಹಾಗಾದರೆ, ಕೋಣೆ ಒಳಗೆ ಹೋಗಿದ್ದೀರ?''

''ಇಲ್ಲ, ನನ್ನ ನಂಬಿ, ಮೊಹರು ತೆಗೆಯುವಾಗ ಒಬ್ಬ ಸಾಕ್ಷಿ ಬೇಕು. ನೀವು ವಕೀಲರು, ನಿಮಗೆ ಈ ವಿಚಾರ ಗೊತ್ತಿದೆಯಾದ್ದರಿಂದ ನಿಮ್ಮ ಎದುರಿಗೆ ಮೊಹರನ್ನು ತೆಗೆದು ನಾವು ಮೂವರೂ ಒಳಗೆ ಪ್ರವೇಶಿಸಬಹುದು. ಇದು ನಿಮಗೆ ಒಪ್ಪಿಗೆಯಾದರೆ ನಮಗೆ ಸಹಾಯ ಮಾಡಿ. ನನಗೆ ದಿನವೆಲ್ಲ ಕಚೇರಿಯಲ್ಲಿ ಕೆಲಸ, ನಿಮಗೂ ಸಹ. ಆದ್ದರಿಂದ ಇವತ್ತು ಒಂಬತ್ತು ಗಂಟೆಗೆ ಭೇಟಿಯಾಗಬಹುದು.''

''ಆಗಲಿ, ನಾನು ಇವತ್ತು ಬರುತ್ತೇನೆ.''

ನಾನು ಸರಿಯಾಗಿ ಒಂಬತ್ತು ಗಂಟೆಗೆ ಹೋದೆ. ಅಲ್ಲಿ ಫೀನಿಕ್ಸ್ ಮತ್ತು ಪರ್ಸಿವಲ್ ನನಗೆ ಕಾದಿದ್ದರು. ಫೀನಿಕ್ಸ್ ಮುಖದ ಮೇಲೆ ಸ್ವಲ್ಪ ಆತಂಕ ಇತ್ತು. ಪರ್ಸಿವಲ್ ನರ ದೌರ್ಬಲ್ಯದಿಂದ ನಡುಗುವ ಹಾಗೆ ಕಾಣಿಸಿದ. ಹಚ್ಚಿದ ದೀಪವನ್ನು ಎತ್ತಿ ಹಿಡಿದು, ''ಸರಿ, ಮೊಹರು ತೆಗೆದು ಒಳಗೆ ಹೋಗುವ ಸಮಯ ಬಂದಿದೆ, ನಡೆಯಿರಿ'' ಎಂದು ಹೇಳಿ ಬಾಗಿಲಿನ ಮುಂದೆ ನಿಂತು ತುಸು ನಡುಕದಿಂದ, ''ಫೀನಿಕ್ಸ್, ಒಳಗೆ ಏನಿದೆಯೋ ನನಗೆ ಗೊತ್ತಿಲ್ಲ; ಏನಿದ್ದರೂ ಅದನ್ನು ನೋಡುವ ಧೈರ್ಯ ನಿನಗೆ ಇರಬೇಕು'' ಎಂದ.